629

ತಾರೀಖು 8ನೆ ಏಪ್ರಿಲ್ 1904.

ನಂ. ರೆ. 3080, ಮೆ|| ವಿ. ಪಿ. ಮಾಧವರಾವ್, ಬಿ. ಎ., ಸಿ. ಐ. ಇ., ಯವರು ಕಾರ್ಯನಿರತರಾದ ತಮ್ಮ ಕೆಲಸಗಳ ಚಾರ್ಜನ್ನು 1904ನೆ ಮಾರ್ಚಿ 12ನೆ ತಾರೀಖಿನ ಮಧ್ಯಾಹ್ನಾತ್ಪರ ರಾವ್ ಬಹದ್ದೂರ್ ಮೆ|| ಸಿ. ಮಾಧವಯ್ಯನವರಿಗೆ ಒಪ್ಪಿಸಿರುತ್ತಾರೆ.

ತಾರೀಖು 9ನೆ ಏಪ್ರಿಲ್ 1904.

ನಂ. ರೆ. 3092—ರೆ. ಫೈ. 23–1903, ವ್ಯವಸಾಯ ಸಂಬಂಧವಾದ ರಸಾಯನ ಶಾಸ್ತ್ರಜ್ಞರಾದ ಡಾಕ್ಟರ್ ಎ. ಲೀವ್ಸ್ಯ್ ಯವರು ತಮ್ಮ ಆಫೀಸಿನ ಚಾರ್ಜನ್ನು 1904ನೆ ಮಾರ್ಚಿ 16ನೆ ತಾರೀಖಿನ ಮಧ್ಯಾಹ್ನಾತ್ಪರ ಸಂಸ್ಥಾನದ ಎರಡನೇ ಭೂರಚನಾ ಶಾಸ್ತ್ರಜ್ಞರಾದ ಮೆ|| ಇ. ಡಬ್ಲ್ಯೂ. ವೆದರಲ್ ಯವರಿಗೆ ಒಪ್ಪಿಸಿರುತ್ತಾರೆ.

ತಾರೀಖು 9ನೆ ಏಪ್ರಿಲ್ 1904.

ನಂ. ರೆ. 3100, ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಮಾಲೂರು ತಾಲ್ಲೂಕಿನ ಅಮಲ್ದಾರರಾದ ಮೆ|| ಸಿ. ಮಾಜಯ್ಯನವರಿಗೆ ಮಾಹೆವಾರು 15ನೆ ತಾರೀಖಿನ ಲಾಗಾಯ್ತು ಯಾ ಅವರು ಉಪ ಯೋಗಿಸಿಕೊಳ್ಳುವ ಇತರ ತಾರೀಖಿನಾದ್ಯ 2 ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

2. ಹಾಲಿ ರಜಾದಲ್ಲಿರುವ ಅಮಲ್ದಾರರಾದ ಮೆ|| ಅಬ್ಬುಲ್ಜಲೀಲ್‌ಯವರು, ಮೆ|| ಮಾಜಯ್ಯನವರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಅಸಿಸ್ಟೆಂಟ್ ಕಮಿಷನರ ಮತ್ತು ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಮಾಲೂರು ತಾಲ್ಲೂಕಿಗೆ ಹಂಗಾಮಿ ತರೀಕು ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 13ನೆ ಏಪ್ರಿಲ್ 194.

ನಂ. ಫೈ. 2820, ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ರಾಮಸ್ವಾಮಯ್ಯನವರು ಬೇರೆ ಕೆಲಸದಲ್ಲಿರುವದ್ದರಿಂದ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹಾಸನದ ಸಬ್ ಜಡ್ಜ್‌ರಾದ ಮೆ|| ಸಿ. ಬಿ. ಕೇಶವಗಿರಿರಾಯರು, ಸಿವಿಲ್ ಕೋರ್ಟುಗಳ ರಜಾಕಾಲದಲ್ಲಿ, ಹಾಸನದ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜನಲ್ಲಿರತಕ್ಕದ್ದು.

ಹುಕುಂ ಬಮೋಜೀಬ್,

ಎಲ್. ಅನಂತಸ್ವಾಮಿರಾವ್,

ಜನರಲ್ ಪ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಫಾರೆಸ್ಟ್.

ತಾರೀಖು 26ನೆ ಮಾರ್ಚಿ 1904.

ನಂ. 746—7899, ಸ|| 1900ನೆ ಜನವರಿ XIನೆ ನಂಬರ್‌ಪ್ಟ್ಡ್ ಮೈಸೂರ ಫಾರೆಸ್ಟ್ ರೆಗ್ಯುಲೇಷನಿನ 76ನೆ ಸೆಕ್ಷನ್ ನಿಯಮಗಳನುಸರಿಸಿ ಶ್ರೀಮಂತ ಮಹಾರಾಜಾ ಸರ್ಕಾರದವರು ಇದರಲ್ಲಿ ಕಂಡ ಆಫೀಸರುಗಳಿಗೆ ಅವರವರ ಹೆಸರುಗಳೆದುರಾಗಿ ನಮೂದಿಸಲ್ಪಟ್ಟ ಅಧಿಕಾರಗಳನ್ನು ಕೊಟ್ಟಿರುತ್ತಾರೆ:—

ಸ|| 1901ನೆ ಜನವರಿ 21ನೆ ಮತ್ತು ನಂ 460—ಫಾ. ಫೈ. 15–1900ನೆ ನಂಬರ್ ಇಸ್ತಿಹಾರ್ನಾಮೆಯ III ನೆ ಕ್ಲಾಸನ್ನು ನೋಡತಕ್ಕದ್ದು.

ಆಫೀಸರುಗಳ ಹೆಸರು.	ಹುದ್ದೆ.	ರೆಗ್ಯುಲೇಷನಿನ ಸೆಕ್ಷನ್.	ಅಧಿಕಾರಗಳ ಸ್ವಭಾವ.
ಮೆ|| ಜೆ. ಜೆ. ವರ್ಟೀರೊಯವರು.	ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್.	26 C.	ಸ್ಟೇಟ್ ಫಾರೆಸ್ಟಿನಲ್ಲಿ ಕೃತ್ಯಗಳನ್ನು ನಡಿಸಲು ಅಪ್ಪಣೆ ಕೊಡುವದಕ್ಕೆ ಅಧಿಕಾರ
,, ಹೆಚ್. ಶ್ರೀನಿವಾಸರಾಯರು	ಡಿಟೋ	53	ಜಫ್ತಿ ಮಾಡಲ್ಪಟ್ಟ ಸೊತ್ತನ್ನು ಖುಲಾಸೆ ವಗ್ಯರೆ ಮಾಡಲು ಹುಕುಂ ಮಾಡುವದಕ್ಕೆ ಅಧಿಕಾರ
		59	ತಕ್ಸೀರುಗಳನ್ನು ರಾಜಿಯಿಂದ ವ್ಯವಸ್ತೆ ಮಾಡಲು ಅಧಿಕಾರ
,, ಜೆಚ್. ರಾಮಯ್ಯನವರು ..	ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್.	65	(1) (a) ಯಾವ ಜಮೀನಿನಲ್ಲಾದರೂ ಪ್ರವೇಶಿಸಿ ಅದನ್ನು ಸರ್ವೆ ಮೊದಲಾದವುಗಳನ್ನು ಮಾಡಲು ಅಧಿಕಾರ.
,, ವಿ. ನರಸಿಹ್ಮಮೂರ್ತಿರಾಯರು.	ಡಿಟೋ	65.	(1) (b) ಸಾಕ್ಷಿಗಳ ಹಾಜರಿಯನ್ನು ಬಲಾತ್ಕರಿಸುವದಕ್ಕೆ ಸಿವಿಲ್ ಕೋರ್ಟಿನ ಅಧಿಕಾರ
,, ಕೆ. ಮುತ್ತಯ್ಯನವರು ...	ಡಿಟೋ	65	(1) (d) ಫಾರೆಸ್ಟ್ ತಕ್ಸೀರುಗಳನ್ನು ವಿಚಾರಣೆ ಮಾಡಿ ಸಾಕ್ಷ್ಯವನ್ನು ಬರಮಾಡಿಕೊಂಡು ರಿಕಾರ್ಡು ಮಾಡಲು ಅಧಿಕಾರ

ತಾರೀಖು 7ನೆ ಏಪ್ರೆಲ್ 1904.

ನಂ. 761—8260, ಮೈಸೂರ ಸರ್ವೀಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಡಿಸ್ಪೆನ್ಸರಿ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕಂಡಕ್ಟರಾದ ಮೆ|| ಕೆ. ಮುತ್ತಯ್ಯನವರಿಗೆ 1904ನೆ ಏಪ್ರೆಲ್ ಗುರ್ಕೆ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖಾ ಗವರ್ನ್‌ಮೆಂಟ್ ಅಫಿಷಿಯೇಟಿಂಗ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 7ನೆ ಏಪ್ರೆಲ್ 1904.

ನಂ. 380—2144, ತುಮಕೂರ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮೆ|| ಎಚ್. ಡಿ. ರೈಸ್ ಯವರಿಗೆ ಮೂಹೆ ಮಜಕೂರು 11ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 7ನೆ ಏಪ್ರೆಲ್ 1904.

ನಂ. 383—2154, ಕೊಪ್ಪ ರೇಂಜಿನ ಅಸಿಸ್ಟೆಂಟ್ ಇಂಜಿನಿಯರಾದ ಮೆ|| ಬಿ. ಬಿ. ಗರುಡಾಚಾರ್ಯ, ಎಲ್. ಸಿ. ಇ., ಯವರಿಗೆ ಮೂಹ ಮಜಕೂರು 20ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 9ನೆ ಏಪ್ರೆಲ್ 1904.

ನಂ. 388—2198, ಶಿವಮೊಗ್ಗ ಡಿವೀಜನಿನ ಅಫಿಷಿಯೇಟಿಂಗ್ ಎಕ್ಸಿಕ್ಯೂಟಿವ್ ಇಂಜನಿಯರಾದ ಮೆ|| ಕೆ. ಪ್ರಹ್ಲಾದರಾಯರಿಗೆ, 1903ನೆ ಡಿಸೆಂಬರ್ 31ನೆ ಮಾರ್ಕ್ಕಂ 1413—7303ನೆ ನಂಬರ್ ಈ ಆಫೀಸಿನ ಇಸ್ತಿಹಾರ್ನಾಮೆಯಲ್ಲಿ 1903ನೆ ಅಕ್ಟೋಬರ್ 2ನೆ ತಾರೀಖಿನಾರಭ್ಯ ಕೊಟ್ಟಿದ್ದ 2 ತಿಂಗಳು 21 ದಿನಗಳ ಪ್ರಿವಿಲೇಜ್ ರಜಾ ಮತ್ತು 3 ತಿಂಗಳು 10 ದಿನಗಳ ಫರ್ಲೋ ರಜಾ ಸೇರಿದ 6 ತಿಂಗಳ ರಜಾ ಬೊಂಬಿಗೆ, 6 ತಿಂಗಳುಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬಮೋಜೀಬ್,
ಡಬ್ಲ್ಯು. ಎಸ್. ಟ್ರೇಲ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖೆಯ ಮೈಸೂರ ಗವರ್ನ್‌ಮೆಂಟ್ ಅಂಡರ್ ಸೆಕ್ರೆಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 11ನೆ ಏಪ್ರೆಲ್ 1904.

ನಂ. 3174—ಮುಜ. ಫೈ. 53-02, ಕಾಲಾತಿಕ್ರಮಣ ಯಾ ಇತರ ಕಾರಣಗಳಿಂದ ತೆಗೆದುಹಾಕಲ್ಪಟ್ಟವರಿಗೆ ಬದಲಾಗಿ ಇದರಡೀ ಕಂಡ ಜನಗಳು ನಾಗಮಂಗಲ ತಾಲ್ಲೂಕಿನ ಕೋಟೆ ಬೆಟ್ಟದಲ್ಲಿರುವ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ನೊಕರ್ರಾಡಲ್ಪಟ್ಟಿರುತ್ತಾರೆ:—

ಮೂ|| ರಾ|| ರಾ|| ಕೋಟೆರಾಯರು.
,, ಲಕ್ಷ್ಮಣರಾಯರು.
,, ಕೆಂಗೋಟೆಯವರು.

ಹುಕುಂ ಬಮೋಜೀಬ್,
ಎಂ. ರಾಮರಾವ್,
ಮುಜರೈ ಇಲಾಖೆಯ ಅಫಿಷಿಯೇಟಿಂಗ್ ಸೆಕ್ರೆಟರಿ.

ಮಿಲಿಟರಿ.

ಇಸ್ತಿಹಾರ್‌ನಾಮೆ.

ತಾರೀಖು 12ನೆ ಏಪ್ರೆಲ್ 1904.

ನಂ. 3187—9, ಮೈಸೂರು ಫೈದಲ್ ಫೋಜು 3ನೆ ಪಟಾಲಮಿನ ಜಮೇದಾರ್ ಅಬ್ದುಲ್ ಅಜೀಜ್‌ಖಾರವರು 1904ನೆ ಫೆಬ್ರವರಿ 29ನೆ ತಾರೀಖಿನಾರಭ್ಯ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಡಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಆರ್. ಜಿ. ಜೋನ್ಸ್,
ಲೆಫ್ಟಿನೆಂಟ್ ಕರ್ನಲ್, ಮಿಲಿಟರಿ ಅಸಿಸ್ಟೆಂಟ್.